(ಇಂದು ದಿನಾಂಕಃ 06-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ವಾಟೀ ಸವಾಲು : 3ನೇ ಎದುರುದಾರರ ಪರ ಶ್ರೀ ವಿ.ವಿ.ಸಿ. ವಕೀಲರಿಂದಃ**

ದಿನಾಂಕ 27-02-2021 ರಂದು ಅಪಘಾತ ಆಗಿರುತ್ತದೆ. ಸದರಿ ಅಪಘಾತವು ಮಹಾರಾಷ್ಟ್ರದ ಪೂಣೆ ಹೈವೆ ಕುಕುಂಬ ಬಳಿ ಅಪಘಾತವಾಗಿರುತ್ತದೆ. ನನ್ನ ಮುಂದು ಹೋಗುತ್ತಿದ್ದ ವಾಹನದ ಚಾಲಕನು ಒಮ್ಮೆಲೆ ಬ್ರೇಕ್ ಹಾಕಿದ್ದರಿಂದ ಆತನ ಹಿಂದೆ ನಾನು ಚಲಾಯಿಸಿಕೊಂಡು ಹೋಗುತ್ತಿದ್ದ ಲಾರಿಯು ನಿಯಂತ್ರಣ ತಪ್ಪಿ ರಸ್ತೆಯ ಪಕ್ಕದ ತಗ್ಗಿನಲ್ಲಿ ಬಿದ್ದಿರುತ್ತದೆ. ಅಪಘಾತ ಆದ ನಂತರ ನಾನು ಡೌಂಡ್ ಗ್ರಾಮದಲ್ಲಿರುವ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ನಾನು ಒಂದು ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ ನಂತರ ಹೆಚ್ಚಿ ನ ಚಿಕಿತ್ಸೆಗಾಗಿ ಬೀದರಿಗೆ ಬಂದಿರುತ್ತೇನೆ. ಬೀದರಿನ ಸರ್ಕಾರಿ ಆಸ್ಪತ್ರೆಯಲ್ಲಿ 25 ಅಥವಾ 26 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ನಿಖರವಾಗಿ ದಿವಸಗಳ ಲೆಕ್ಕ ಹೇಳಲು ಬರುವುದಿಲ್ಲ. ನಂತರ ಪುನಃ ಬೀದರಿನ ಸರ್ಕಾರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ಆಗ ನನ್ನ ಕಾಲಿನಲ್ಲಿ ಅಳವಡಿಸಿದ ಅಳವಡಿಕೆಗಳನ್ನು ತೆಗೆದಿರುತ್ತಾರೆ. ನಾನು ಗುಲ್ಬರ್ಗಾದಲ್ಲಿ ಕುಲ್ಕರ್ಣಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಮೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು 2 ಲಕ್ಷ ರೂಪಾಯಿ ವೆಚ್ಚ ಮಾಡಿರುತ್ತೇನೆ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಮುಂದುವರೆದು ಚಿಕಿತ್ಸೆ ಪಡೆಯುತ್ತಿದ್ದೇನೆಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಸಲ್ಲಿಸಿಲ್ಲ ಎಂದರೆ ಸರಿ. ನಾನು 1ನೇ ಎದುರುದಾರನ ಹತ್ತಿರ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ನಾನು ವಾಹನಕ್ಕೆ ಸಂಬಂಧಿಸಿದಂತೆ ಹಾಜರು ಪಡಿಸಿದ ದಾಖಲಾತಿಗಳಲ್ಲಿ 2ನೇ ಎದುರುದಾರನೇ ಮಾಲೀಕನಾಗಿರುತ್ತಾನೆ ಎಂದು ನಮೂದು ಇರುತ್ತದೆ ಎಂದರೆ ಸರಿ. 1ನೇ ಎದುರುದಾರ 2ನೇ ಎದುರುದಾನಿಂದ ಅಪಘಾತಕ್ಕಿಡಾದ ವಾಹನವನ್ನು ಕ್ರಯ ಪಡೆದ ಬಗ್ಗೆ ತೋರಿಸಲು ದಾಖಲಾತಿಯನ್ನು ಸಲ್ಲಿಸಿಲ್ಲ ಎಂದರೆ ಸರಿ. ವಾಹನದ ವಿಮಾ ಪಾಲಿಸಿಗಳು 2ನೇ ಎದುರುದಾರನ ಹೆಸರಿನಲ್ಲಿ ಇವೆ ಎಂದರೆ ಸರಿ. ನಾನು 2ನೇ ಎದುರುದಾರನ ಹತ್ತಿರ ಕೆಲಸ ಮಾಡಿಲ್ಲ ಎಂದರೆ ಸರಿ. 1ನೇ ಎದುರುದಾರನ ಬಳಿ ಇದ್ದ ಅಪಘಾತವಾದ ವಾಹನದಲ್ಲಿ ಕೆಲಸ ಮಾಡಿರುತ್ತೇನೆ. 2ನೇ ಎದುರುದಾರನಿಂದ ಯಾವುದೇ ತಿಂಗಳ ವೇತನ ಭತ್ಯೆ ಪಡೆದಿಲ್ಲ ಎಂದರೆ ಸರಿ. 2ನೇ ಎದುರುದಾರನಿಗೂ ಮತ್ತು ನನಗೂ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿ. 1ನೇ ಎದುರುದಾರನ ಜೋತೆ 3ನೇ ಎದುರುದಾರನ ವಿಮಾ ಕರಾರು ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ನಾನು ಒಂದು ವರ್ಷದ ಅವಧಿಯವರೆಗೆ 1ನೇ ಎದುರುದಾರನ ಬಳಿ ಕೆಲಸ ಮಾಡಿರುತ್ತೇನೆ.

ನಾನು ತಿಂಗಳಿಗೆ ರೂ. 20000/- ಮತ್ತು ಪ್ರತಿ ದಿನ ರೂ.200/- ಭತ್ಯೆಯನ್ನು ಪಡೆಯುತ್ತಿದ್ದೆ ಎಂದು ಸುಳ್ಳು ಹೇಳತ್ತಿದ್ದೇನೆ ಎಂದರೆ ಸರಿಯಲ್ಲ. ಈ ಅಪಘಾತದಿಂದ ನಾನು ವಾಹನ ಚಾಲನೆ ಮಾಡಲು ಸಮರ್ಥನಲ್ಲ ಅಂತ ಸಾರಿಗೆ ಇಲಾಖೆಯವರು ನನ್ನ ಚಾಲನಾ ಪರವಾನಿಗೆಯನ್ನು ಅಮಾನತು ಪಡಿಸಿಕೊಂಡಿಲ್ಲ ಎಂದರೆ ಸರಿ. ಪ್ರತಿ 3 ವರ್ಷಕ್ಕೊಮ್ಮೆ ಸರಕು ವಾಹನ ಚಾಲನಾ ಪರವಾನಿಗೆಯನ್ನು ನವೀಕರಣ ಮಾಡಬೇಕಾಗುತ್ತದೆ ಎಂದರೆ ಸರಿ. ನಾನು ನನ್ನ ಚಾಲನಾ ಪರವಾನಿಗೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂದರೆ ಸರಿ. 2017 ರಲ್ಲಿ ಚಾಲನಾ ಪರವಾನಿಗೆಯನ್ನು ಪಡೆದಿರುತ್ತೇನೆ. ಅದನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ನನಗೆ ಅಪಘಾತದಿಂದ ಯಾವುದೇ ದೈಹಿಕ ನ್ಯೂನ್ಯತೆಯನ್ನು ಹೊಂದಿಲ್ಲ ಎಂದರೆ ಸರಿಯಲ್ಲ. ನಾನು ಈಗಲೂ ಮೊದಲಿನಂತೆ ಕೆಲಸವನ್ನು ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು 1ನೇ ಎದುರುದಾರನ ಬಳಿ ಹೋಗಿ ನನಗೆ ಅಪಘಾತದ ಪರಿಹಾರವನ್ನು ಕೋಡುವಂತೆ ಕೇಳಿರುವುದಿಲ್ಲ. ನಾನು 2ನೇ ಎದುರುದಾರನ ಬಳಿ ಚಾಲಕ ಅಂತ ಕೆಲಸ ಮಾಡಿಲ್ಲದ ಕಾರಣ ವಿಮಾ ಕಂಪನಿಯಿಂದ ಯಾವುದೇ ಪರಿಹಾರವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.